# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ, ಉಡುಪಿ ಜಿಲ್ಲೆಯ ಸಮುದ್ರ ದಂಡೆಯ ಶುಚಿತ್ವ ಯೋಜನೆಗೆ Beach Cleaning Machine ಖರೀದಿಸಲು ಅನುದಾನ ಬಿಡುಗಡೆ – ಕುರಿತು.

**ಓದಲಾಗಿದೆ:-**

1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 92 ಇಆಸು 2009, ದಿನಾಂಕ:08.07.2010.
2) ಸರ್ಕಾರದ ಪತ್ರ ಸಂಖ್ಯೆ. ಸಿಆಸುಇ 118 ಇಆಸು 2015, ದಿನಾಂಕ:25.06.2015.
3) ಉಡುಪಿ ಜಿಲ್ಲಾಧಿಕಾರಿ ಇವರ ಪತ್ರ ಸಂಖ್ಯೆ: ಡಿಒಟಿ/ಡಿಟಿಡಿಸಿ/ಯು/2015-16 ದಿನಾಂಕ: 11.09.2015
4) ದಿನಾಂಕ:13.10.2015 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಚಾಲೆಂಜ್ ಫಂಡ್ ಯೋಜನೆಯ ಸಭಾ ನಡವಳಿ.
5) ಉಡುಪಿ ಜಿಲ್ಲಾಧಿಕಾರಿ ಇವರ ಪತ್ರ ಸಂಖ್ಯೆ: ಜಿನಕೋ(1)ಸಿಆರ್ 44/2015-16(ಕಂ.ಸಂ. 99526) ದಿನಾಂಕ: 26.12.2015

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ದಿನಾಂಕ:08.07.2010 ರ ಸರ್ಕಾರದ ಆದೇಶದಲ್ಲಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ ಚಾಲೆಂಜ್ ಫಂಡ್ ಯೋಜನೆಯನ್ನು ಸ್ಥಾಪಿಸಲಾಗಿದೆ. ಈ ಯೋಜನೆಯಲ್ಲಿ ಗುಣಮಟ್ಟದ ಗುರಿಗಳನ್ನು ಸಾಧಿಸಲು ಪ್ರಯೋಗಾತ್ಮಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ ಈ ಯೋಜನೆಗೆ ಸರ್ಕಾರವು 2015-16ನೇ ಸಾಲಿನಲ್ಲಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದೆ.

ಓದಲಾದ (2)ರ ದಿನಾಂಕ: 25.06.2015 ರ ಪತ್ರದಲ್ಲಿ ಚಾಲೆಂಜ್ ಫಂಡ್ ಯೋಜನೆಯಡಿ ಪ್ರಸ್ತಾವನೆಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳಿಂದ ಪಡೆಯುವ ಸಲುವಾಗಿ ಪತ್ರವನ್ನು ಬರೆಯಲಾಗಿತ್ತು.

ಓದಲಾದ (3)ರ ದಿನಾಂಕ: 11.09.2015 ರ ಪತ್ರದಲ್ಲಿ ಜಿಲ್ಲಾಧಿಕಾರಿ, ಉಡುಪಿ ಇವರು ಉಡುಪಿ ಜಿಲ್ಲೆಯ ಪ್ರವಾಸೋದ್ಯಮದ ಹಿತದೃಷ್ಟಿಯಿಂದ ಮತ್ತು ಉಡುಪಿ ಜಿಲ್ಲೆಯಾದ್ಯಂತ ಇರುವಂತಹ ವಿವಿಧ ಸಮುದ್ರ ತೀರಗಳಿಗೆ ಪ್ರವಾಸಿಗರು ಅತಿ ಹೆಚ್ಚು ಸಂಖ್ಯೆಗಳಲ್ಲಿ ಭೇಟಿ ನೀಡುತ್ತಿದ್ದು, ಪ್ರವಾಸೋದ್ಯಮದ ದೃಷ್ಟಿಯಿಂದ ಉತ್ತಮವಾಗಿದ್ದು, ಮತ್ತೊಂದೆಡೆ ಕಸದ ಉತ್ಪಾದನೆಯು ಹೆಚ್ಚಾಗಿದ್ದು, ಸಮುದ್ರ ತೀರವು ಕಲುಷಿತಗೊಂಡಿರುತ್ತದೆ. ಆದ್ದರಿಂದ ಸಮುದ್ರ ತೀರವನ್ನು ವಿನೂತನ ಮಾದರಿಯಲ್ಲಿ ಸುಚಿಗೊಳಿಸುವ ಉದ್ದೇಶದಿಂದ ಮತ್ತು ಈಗಾಗಲೇ ತಮಿಳುನಾಡು, ಗೋವಾ ಮತ್ತು ಒರಿಸಾ ರಾಜ್ಯಗಳು ಬಳಸುತ್ತಿರುವಂತೆ **Beach Cleaning Machine** ಅನ್ನು ಖರೀದಿಸುವ ಸಲುವಾಗಿ ರೂ.75.00 ಲಕ್ಷಗಳನ್ನು ಚಾಲೆಂಜ್ ಫಂಡ್ ಯೋಜನೆಯಡಿ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಮಾದರಿಯ ಸ್ವಚ್ಛತೆಯನ್ನು ಕೈಗೊಂಡಲ್ಲಿ ಸಿಬ್ಬಂದಿಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಸ್ವಚ್ಛತೆ ಕಾರ್ಯವನ್ನು ನಡೆಸಬಹುದು. ಸ್ವಚ್ಛ ಪರಿಸರದಿಂದ ಪ್ರವಾಸಿಗರ ಸಂಖ್ಯೆಯು ಹೆಚ್ಚಾಗುವುದು ಎಂದು ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ.

ಓದಲಾದ (4) ರಲ್ಲಿ ಚಾಲೆಂಜ್‌ಫಂಡ್ ಯೋಜನೆ ಜಾರಿಗೆ ಸಂಬಂಧಪಟ್ಟಂತೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 13.10.2015 ರಂದು ನಡೆದ

ಸಭೆಯಲ್ಲಿ ಜಿಲ್ಲಾಧಿಕಾರಿ, ಉಡುಪಿ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಮುದ್ರ ತೀರದ ಸ್ವಚ್ಛತೆಗಾಗಿ **Beach Cleaning Machine** ಖರೀದಿಸಲು ಟೆಂಡರ್ ಪ್ರಕ್ರಿಯೆ ನಡೆಸಿ, ಯೋಜನೆ ಕೈಗೊಳ್ಳಲು ತೀರ್ಮಾನಿಸಲಾಯಿತು.

ಓದಲಾದ (5)ರ ದಿನಾಂಕ: 26.12.2015 ರ ಪತ್ರದಲ್ಲಿ ಜಿಲ್ಲಾಧಿಕಾರಿ, ಉಡುಪಿ ಇವರು **Beach Cleaning Machine** ಖರೀದಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಅನುಸರಿಸಿದ್ದು, ಜನವರಿ 2016 ರ ಒಳಗಾಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಿ, ರೂ. 75.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಅದರಂತೆ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:220:ಇಆಸು:2015</u>**
**<u>ಬೆಂಗಳೂರು, ದಿನಾಂಕ:26.12.2015</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರದ ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ, ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ ಇವರು ರೂಪಿಸಿರುವ ಉಡುಪಿ ಜಿಲ್ಲೆಯ ಸಮುದ್ರ ತೀರಗಳ ಸುಚಿತ್ವ ಯೋಜನೆಯನ್ನು ಪುರಸ್ಕರಿಸಿದ್ದು, ಯೋಜನೆ ಕಾರ್ಯಾಕ್ಕಾಗಿ **Beach Cleaning Machine** ಖರೀದಿಸಲು ರೂ.75.00 ಲಕ್ಷಗಳ (ಎಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆಗೆ ಮಂಜೂರು ಮಾಡಿದೆ. ಈ ಅನುದಾನದ ಬಳಕೆಗೆ ಮುನ್ನ ಯಂತ್ರ ಖರೀದಿಗೆ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ನಿಯಮಾನುಸಾರ ಖರೀದಿಸಲು ತಿಳಿಸಿದೆ.

ಈ ಅನುದಾನವನ್ನು ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿ ಕಾರ್ಯಾಲಯದ ಡಿ.ಡಿ.ಒ. ಸಂಖ್ಯೆ: 2000RD0002 ಗೆ ಬಿಡುಗಡೆ ಮಾಡಲಾಗಿದೆ. ಅನುದಾನ ಬಳಕೆಯ ಪ್ರಮಾಣ ಪತ್ರವನ್ನು ಯೋಜನೆ ನಿರ್ವಹಿಸುವ ಅಧಿಕಾರಿ ಸಕಾಲದಲ್ಲಿ ಒದಗಿಸುವುದು.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2052-00-090-0-25-059 (ಯೋಜನೇತರ) ಆಡಳಿತ ಸುಧಾರಣೆ ಸವಾಲು ನಿಧಿ-ಇತರೆ ಖರ್ಚುಗಳ ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ
26/12
(ಅಪರ್ಣಾ ಪಾವಟೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತರಬೇತಿ)

26/12/15

ಪ್ರತಿ:

1. ಮಹಾಲೇಖಪಾಲರು ಕರ್ನಾಟಕ, (ಆಡಿಟ್ 1 ಮತ್ತು 2) (ಲೆಕ್ಕಪತ್ರ 1 ಮತ್ತು 2), ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ

. . . . .3